# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಕ್ಷಿಣ ವಲಯ

## ಬೈರಸಂದ್ರ , ಹೊಸ ವಾರ್ಡ ಸಂಖ್ಯೆ: 196 (ಹಳೆಯ ವಾರ್ಡ ಸಂಖ್ಯೆ: 168 & 169)

**ದಿನಾಂಕ: 18.01.2023 ರಂದು ಹೊಸ ವಾರ್ಡ ಸಂಖ್ಯೆ 196 ಬೈರಸಂದ್ರ ವಾರ್ಡನಲ್ಲಿ ನಡೆದ ವಾರ್ಡ ಸಮಿತಿ ಸಭೆ:**

## -: ಸಮಿತಿ ಸಭೆಯ ನಡವಳಿಗಳು :-

ವಾರ್ಡ ಸಮಿತಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ಮತ್ತು ವಾರ್ಡ ಸಮಿತಿ ಸದಸ್ಯರು:-

| ಕ್ರ.ಸಂ | ಹೆಸರು | ಹುದ್ದೆ |
|---|---|---|
| 01 | ಶ್ರೀ ವಾಲು ರಾಥೋಡ್ | ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು |
| 02 | ಶ್ರೀ ರಾಮಚಂದ್ರ .ಸಿ | ಹಿರಿಯ ಆರೋಗ್ಯ-168 ನಿರೀಕ್ಷಕರು, ಬಿ.ಬಿ.ಎಂ.ಪಿ |
| 03 | ಶ್ರೀಮತಿ ಪೂನಂ ಬಿ ಡಿ | ಹಿರಿಯ ಆರೋಗ್ಯ-169 ನಿರೀಕ್ಷಕರು, ಬಿ.ಬಿ.ಎಂ.ಪಿ |
| 04 | ಕುಮಾರಿ ವಿಶಾಲಾಕ್ಷಿ ಬಂಡಿ | ಸಹಾಯಕ ಅಭಿಯಂತರರು ವಾರ್ಡ -168(ಹೊರಗುತ್ತಿಗೆ) |
| 05 | ಶ್ರೀಮತಿ ಡಾ. ಹಲೀಮ್ ಸಾರ | MO-168, ಆರೋಗ್ಯ ಇಲಾಖೆ, ಬಿ.ಬಿ.ಎಂ.ಪಿ |
| 06 | ಶ್ರೀ ಗೌತಮ್.ವೈ | SWM-168 |
| 07 | ಶ್ರೀ ರಾಮಮೂರ್ತಿ ಕೆ.ಸಿ | Ward Marshal |
| 08 | ವಿಜಯ್‌ಕುಮಾರ.ಜಿ | JE, BESCOM |
| 09 | ಶ್ರೀ ನವೀನ್‌ಕುಮಾರ ಪಿ | Ward Marshal |
| 10 | ಶ್ರೀ ರಮೇಶ.ವಿ.ಬಿ | SWM-169 |
| 11 | ಶ್ರೀ ವಿಜಯ್ ಹೆಚ್.ಬಿ | ಸ.ಅ, SWD (outsource) |
| 12 | ಶ್ರೀ ಸತೀಶ್.ಸ್ | BWSSB Valve Man |
| 13 | ಶ್ರೀ ಸತೀಶ್ ಕೆ | Tilaknagar Police Station |
| 14 | ಶ್ರೀ ಎಂ. ಎ. ಹುಸೇನ್ | Mic Layout, Traffic Police Station |
| 15 | ಶ್ರೀ ಭೀಮಣ್ಣ | Tilaknagar Police Station |
| 16 | ಶ್ರೀ ವಿಜಯಕುಮಾರ್ | Project – AE |
| 17 | ವಾರ್ಡ 196 ರ L.I.C ಕಾಲೋನಿ ಸ್ಥಳಿಯ ನಿವಾಸಿಗಳ ಸಂಘ ಹಾಗೂ 4ನೇ ಟಿ ಬ್ಲಾಕ್‌ನ ಸ್ಥಳಿಯ ನಿವಾಸಿಗಳ ಸಂಘ ಮತ್ತು ಸಾರ್ವಜನಿಕರು | |

ವಾರ್ಡ ಸಮಿತಿ ಅದ್ಯಕ್ಷರು ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಸ್ವಾಗತ ಕೋರುತ್ತಾ , ಸಭೆಯನ್ನು ಪ್ರಾರಂಭಿಸಿದರು.

1. ಮಾನ್ಯ ನೋಡಲ್ ಅಧಿಕಾರಿಗಳು ಮಾತನಾಡುತ್ತಾ ದಿನಾಂಕ 26.12.2022 ರಂದು ಸಾರ್ವಜನಿಕರು ತಿಳಿಸಿದ ಸಮಸ್ಯೆಗಳ ಬಗ್ಗೆ ಹಾಗೂ ಅಧಿಕಾರಿಗಳು ತೆಗೆದುಕೊಂಡ ಕ್ರಮದ ಮಾಹಿತಿ ಪಡೆದುಕೊಂಡರು.

2. ವಾರ್ಡ-196 (ಹೊಸ) ವ್ಯಾಪ್ತಿಯರಲ್ಲಿರುವ 10ನೇ ಅಡ್ಡರಸ್ತೆಯಲ್ಲಿ Shoulder drain ಮಾಡಿದ್ದು, ಆದರೆ Shoulder drain ಗಳಿಗೆ Steel Grating ಅಳವಡಿಸಿರುದಿಲ್ಲ ಮತ್ತು ಇನ್ನು ಅನೇಕ ಕಡೆ Shoulder drain ನಿರ್ಮಾಣ ಮಾಡುವಂತೆ ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, SWD (South), ಬಿ.ಬಿ.ಎಂ.ಪಿ)**

Scanned with OKEN Scanner

3. ವಾರ್ಡ–196 (ಹೊಸ) ವ್ಯಾಪ್ತಿಯ LIC Colony ಮತ್ತು ಜಯನಗರ 4ನೇ 'ಟಿ' ಬ್ಲಾಕ್‌ನಲ್ಲಿರುವ ವಿಷ್ಣುವರ್ಧನ್ ಪಾರ್ಕನಲ್ಲಿರುವ ಬೀದಿ ದೀಪಗಳು, ಗೊಂಬೆಗಳು ಮತ್ತು Music System ಹಾಳಾಗಿದ್ದು, ಬೀದಿ ದೀಪಗಳು ಇಲ್ಲದೆ ಇರುವುದರಿಂದ ಸಂಜೆ ಮತ್ತು ಮುಂಜಾನೆ ಸಮಯದಲ್ಲಿ ಸಾರ್ವಜನಿಕರಿಗೆ ಓಡಡಲು ತೊಂದರೆಯಾಗುತ್ತಿದ್ದು. ಕೂಡಲೇ ಬೀದಿ ದೀಪಗಳನ್ನು ಅಳವಡಿಸುವಂತೆ ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, ವಿದ್ಯುತ್(ದ) ಹಾಗೂ ಸ.ಕಾ.ನಿ.ಅ ಯೋಜನೆ(ದಕ್ಷಿಣ) ಮತ್ತು ತೊಟಗಾರಿಕೆ (ದ) ಜಯನಗರ)**

4. ವಾರ್ಡ–196 (ಹೊಸ) ವ್ಯಾಪ್ತಿಯ LIC Colony ಮತ್ತು ಜಯನಗರ 4ನೇ 'ಟಿ' ಬ್ಲಾಕ್‌ನಲ್ಲಿರುವ ವಿಷ್ಣುವರ್ಧನ್ ಪಾರ್ಕ್‌ನಲ್ಲಿ ಸೊಳ್ಳೆಗಳು ತುಂಬಾ ಹೆಚ್ಚಾಗಿದ್ದು , ಪಾರ್ಕ್‌ಗಳಲ್ಲಿನ ಸೊಳ್ಳೆಗಳನ್ನು ನಿಯಂತ್ರಿಸಲು ಸೊಳ್ಳೆ ಔಷದಿಯನ್ನು ಸಿಂಪಡಿಸಲು ಸಭೆಯಲ್ಲಿ ಕೋರಿದರು. **(ಕ್ರಮ: ಆರೋಗ್ಯಾಧಿಕಾರಿಗಳು, ಬಿ.ಬಿ.ಎಂ.ಪಿ ಜಯನಗರ)**

5. ವಾರ್ಡ–196 (ಹೊಸ) ವ್ಯಾಪ್ತಿಯರಲ್ಲಿರುವ 10ನೇ ಅಡ್ಡರಸ್ತೆ Footpath ಮೇಲೆ ವಾಹನಗಳನ್ನು ನಿಲ್ಲಿಸುವುದರಿಂದ ವಾಹನ ಒಡಡಲು ತುಂಬಾ ತೊಂದರೆಯಾಗುತ್ತಿದ್ದು. ಪ್ರಸುತ್ತ ಶೇಕಡ 50% ಅಷ್ಟು ಸಮಸ್ಯೆಯು ಕಡಿಮೆಯಾಗಿದ್ದು, ಇನ್ನು ಬಾಕಿ ಉಳಿದಿರುವ ವಾಹನಗಳ ಪಾರ್ಕಿಂಗ್ ಅನ್ನು ತರೆವುಗೊಳಿಸಲು ಬಗ್ಗೆ ಕ್ರಮ ವಹಿಸುವಂತೆ ಸಭೆಯಲ್ಲಿ ಕೋರಿದರು. **(ಕ್ರಮ: ಮೈಕೊ ಲೇಔಟ್ ಸಂಚಾರ ಪೋಲಿಸ್ ಠಾಣೆ)**

6. LIC ಕಾಲೋನಿನಲ್ಲಿರುವ 3ನೇ ಅಡ್ಡರಸ್ತೆ, 5ನೇ ಅಡ್ಡರಸ್ತೆ ಮತ್ತು ಅನೇಕ ರಸ್ತೆಗಳಲ್ಲಿರುವ ಮರದ ಉದ್ದವಾಗಿರುವ ಮತ್ತು ಒಣಗಿರುವ ಮರದ ಕೊಂಬೆಗಳು ಬೀಳುವ ಸ್ಥಿತಿಯಲ್ಲಿದ್ದು. ಸದರಿ ರಸ್ತೆಗಳಲ್ಲಿರುವ ಮರದ ಉದ್ದವಾಗಿರುವ ಮತ್ತು ಒಣಗಿರುವ ಮರದ ಕೊಂಬೆಗಳನ್ನು ಕತ್ತರಿಸುವಂತೆ ಸಭೆಯಲ್ಲಿ ಕೋರಿದರು. **(ಅರಣ್ಯ ಇಲಾಖೆ (ದಕ್ಷಿಣ) ಬಿ.ಬಿ.ಎಂ.ಪಿ ಜಯನಗರ)**

7. ಜಯನಗರ 4ನೇ 'ಟಿ' ಬ್ಲಾಕ್‌ನಲ್ಲಿರುವ ವಿಷ್ಣುವರ್ಧನ್ ಪಾರ್ಕನ ಮರಗಳು ಮತ್ತು ಅಕ್ಕ ಪಕ್ಕದ ರಸ್ತೆಗಳಲ್ಲಿರುವ ಮರದ ಒಣಗಿದ ಮತ್ತು ಉದ್ದವಾಗಿರುವ ಕೊಂಬೆಗಳು ಬೀಳುವ ಸ್ಥಿತಿಯಲ್ಲಿದ್ದು. ಸದರಿ ಪಾರ್ಕ ಮತ್ತು ರಸ್ತೆಗಳಲ್ಲಿರುವ ಮರದ ಉದ್ದವಾಗಿರುವ ಮತ್ತು ಒಣಗಿರುವ ಕೊಂಬೆಗಳನ್ನು ಕತ್ತರಿಸುವಂತೆ ಸಭೆಯಲ್ಲಿ ಕೋರಿದರು. **(ಅರಣ್ಯ ಇಲಾಖೆ (ದಕ್ಷಿಣ) ಬಿ.ಬಿ.ಎಂ.ಪಿ ಜಯನಗರ)**

8. ವಾರ್ಡ 168 ರ ವ್ಯಾಪ್ತಿಯ 4ನೇ ಟಿ ಬ್ಲಾಕ್‌ನ, 26ನೇ ಮುಖ್ಯರಸ್ತೆಯಲ್ಲಿ SSMRV ಕಾಲೇಜಿನ ವಿದ್ಯಾರ್ಥಿಗಳು ದ್ವಿಚಕ್ರವಾಹಗಳಿಂದ Wheeling, Rash driving ಮಾಡುವುದು ಮತ್ತು ರಸ್ತೆಗಳಲ್ಲಿ Birthday ಅಚರಣೆ ಮಾಡುವುದು ಹಾಗೂ ಮಾದಕ ವ್ಯಾಸನಗಳ ಚಟುವಟಿಕೆಯನ್ನು ಮಾಡುತ್ತಿದ್ದು. ಇದರ ಬಗ್ಗೆ ಕ್ರಮವಹಿಸಲು ಸಭೆಯಲ್ಲಿ ಕೋರಿದರು. **(ಕ್ರಮ: ಜಯನಗರ/ತಿಲಕ್‌ನಗರ ಪೋಲಿಸ್ ಠಾಣೆ & MICO ಲೇಔಟ್, ಸಂಚಾರ ಪೋಲಿಸ್ ಠಾಣೆ)**

9. ವಾರ್ಡ 168 ರ ವ್ಯಾಪ್ತಿಯ 4ನೇ ಟಿ ಬ್ಲಾಕ್‌ನ, 26ನೇ ಮುಖ್ಯರಸ್ತೆಯಲ್ಲಿ ವಾಹನ ದಟ್ಟನೆ ಹೆಚ್ಚಾಗಿದ್ದು, ಅನಾಮಧೇಯ ವ್ಯಕ್ತಿಗಳಿಂದ ವಿಷ್ಣುವರ್ಧನ್ ಪಾರ್ಕನ ಸುತ್ತಲು ಇರುವ ರಸ್ತೆಗಳಲ್ಲಿ ವಾಹನ ಪಾರ್ಕಕಿಂಗ್‌ನಿಂದ ತುಂಬಾ ಟ್ರಾಫೀಕ್ ಸಮಸ್ಯೆಯಾಗುತ್ತಿದ್ದು. ಇದರಿಂದ ಸಾರ್ವಜನಿಕರಿಗೆ ಸಂಚಾರಕ್ಕೆ ತೊಂದರೆಯಾಗುತಿರುತ್ತದೆ. ಇದರ ಬಗ್ಗೆ ಕ್ರಮವಹಿಸಲು ಸಭೆಯಲ್ಲಿ ಕೋರಿದರು. **(ಕ್ರಮ: ಜಯನಗರ ಪೋಲಿಸ್ ಠಾಣೆ & MICO ಲೇಔಟ್, ಸಂಚಾರ ಪೋಲಿಸ್ ಠಾಣೆ)**

Scanned with OKEN Scanner

10. ವಾರ್ಡ 169 ರ ವ್ಯಾಪ್ತಿಯ ನಕಲುಬಂಡೆಯಲ್ಲಿ, 13ನೇ ಮುಖ್ಯರಸ್ತೆ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮಾದಕ ವ್ಯಾಸನಗಳ ಚಟುವಟಿಕೆಯನ್ನು ಮಾಡುತ್ತಿದ್ದು. ಇದರ ಬಗ್ಗೆ ಕ್ರಮವಹಿಸಲು ಸಭೆಯಲ್ಲಿ ಕೋರಿದರು. **(ಕ್ರಮ: ಜಯನಗರ/ತಿಲಕ್‌ನಗರ ಪೋಲಿಸ್ ಠಾಣೆ)**

11. ವಾರ್ಡ 169 ರ ವ್ಯಾಪ್ತಿಯ ನಕಲುಬಂಡೆಯಲ್ಲಿರುವ ಒಳಚರಂಡಿ ಮಾರ್ಗವು ಅನೇಕ ಬಾರಿ ಬ್ಲಾಕ್ ಅಗುತ್ತಿದ್ದು, ಮ್ಯಾನ್‌ಹೋಲ್‌ಗಳಲ್ಲಿರುವ Silt ಅನ್ನು ತೆರೆವುಗೂಳಿಸುವುದು ಮತ್ತು ತೆರೆವುಗೊಳಿಸಿರುವ Silt ಅನ್ನು BWSSB ಇಲಾಖೆ ವತಿಯಿಂದ ತೆರೆವುಗೊಳಿಸಲು ಕ್ರಮವಹಿಸಲು ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ , BWSSB ಇಲಾಖೆ ಜಯನಗರ)**

12. ವಾರ್ಡ 169 ರ ವ್ಯಾಪ್ತಿಯ ಬಿ.ಡಿ.ಎ ಶಾಪಿಂಗ್ ಕಾಂಪ್ಲೆಕ್ಸ್‌ನಲ್ಲಿರುವ ಪಾದಚಾರಿ ಮಾರ್ಗದಲ್ಲಿ ಮತ್ತು ಸುತ್ತಲು ಇರುವ ರಸ್ತೆಯ ಬದಿಯಲ್ಲಿ ವ್ಯಾಪಾರ ಮಾಳಿಗೆಗಳನ್ನು ಇಟ್ಟುಕೊಂಡು ವ್ಯಾಪಾರ ನಡೆಸುತ್ತಿದ್ದು, ಇದರಿಂದ ಸಾರ್ವಜನಿಕರು ಓಡಡಲು ತುಂಬಾ ತೊಂದರೆಯಾಗುತ್ತಿರುತ್ತದೆ. ಇದರ ಬಗ್ಗೆ ಕ್ರಮವಹಿಸಲು ಸಭೆಯಲ್ಲಿ ಕೋರಿದರು. **(ಕ್ರಮ: ಸಹಾಯಕ ಕಂದಾಯ ಅಧಿಕಾರಿಗಳು(ಮಾರ್ಕೆಟ್), ಬಿ.ಬಿ.ಎಂ.ಪಿ)**

**ನಿರ್ಣಯ:** ಕೊನೆಯದಾಗಿ ಸದಸ್ಯ ಕಾರ್ಯದರ್ಶಿಗಳು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ವಂದನೆಯನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಮುಂದಿನ ಸಭೆಯಲ್ಲಿ ವರದಿ ಮಾಹಿತಿಯನ್ನು ಒದಗಿಸಬೇಕೆಂದು ಕಾರ್ಯದರ್ಶಿ ಮತ್ತು ಇಲಾಖಾ ಅಧಿಕಾರಿಗಳಿಗೆ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಾಯಕ ಅಭಿಯಂತರರು,
ವಾರ್ಡ –168(ಹೂರಗುತ್ತಿಗೆ)

(ಶ್ರೀ ವಾಲು ರಾಥೋಡ್)
ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಮಿತಿ ಸಭೆ
ಹೂಸ ವಾರ್ಡ–196 ಬೈರಸಂದ್ರ (ಹಳೆಯ ವಾರ್ಡ 168&169)

ಪ್ರತಿಯನ್ನು:

1. ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
2. ಮಾನ್ಯ ವಲಯ ಆಯುಕ್ತರು (ದಕ್ಷಿಣ), ಬಿ.ಬಿ.ಎಂ.ಪಿ ರವರ ಅವಗಾಹನೆಗೆ ಸಲ್ಲಿಸಿದೆ.
3. ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
4. ಕಛೇರಿ ಕಡತಕ್ಕೆ.

Scanned with OKEN Scanner